Abhay S. Oka
Chief Justice
High Court of Karnataka

High Court of Karnataka
Bengaluru - 560 001
✆ : Off : 080-22954601
22954602

# APPEAL TO THE MEMBERS OF THE BAR

From March 21, 2020, as can be seen from the Memorandum issued by the High Court of Karnataka yesterday, the City Civil Courts, Small Cause Courts, Rural Courts, Family Courts, Labour Courts and Industrial Tribunals working in Bengaluru City will be working in vacation mode and only very urgent and bail matters will be taken up during the limited Court hours. Dates will be automatically assigned to the matters on the cause list without causing any damage.

The Central and the State Governments have appealed to avoid mass gatherings or mass collection of people in order to prevent the spread of Novel Corona Virus (COVID-19) epidemic. Notwithstanding the Memorandum issued yesterday, today large number of Advocates and litigants were present in the aforesaid Court complexes. My appeal to the members of the Bar is to attend the aforesaid Courts only if it is mandatory. My request to the members of the Bar is to ensure that only those litigants whose presence is mandatory before the Courts, visit the Court complexes.

March 21, 2020

Justice Abhay Shreeniwas Oka
Chief Justice

Abhay S. Oka
Chief Justice
High Court of Karnataka

High Court of Karnataka
Bengaluru - 560 001
✆ : Off : 080-22954601
22954602

# ವಕೀಲರ ಸಂಘದ ಸದಸ್ಯರಲ್ಲಿ ಮನವಿ

ಕರ್ನಾಟಕ ಉಚ್ಚ ನ್ಯಾಯಾಲಯದಿಂದ ನಿನ್ನೆ ಹೊರಡಿಸಲಾದ ಅಧಿಕೃತ ಜ್ಞಾಪನ ಪತ್ರದಲ್ಲಿ ನೋಡಬಹುದಾದಂತೆ ದಿನಾಂಕ: 21ನೇ ಮಾರ್ಚ್, 2020ರಿಂದ ಬೆಂಗಳೂರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಟಿ ಸಿವಿಲ್ ನ್ಯಾಯಾಲಯಗಳು, ಸಣ್ಣ ವ್ಯಾಜ್ಯ ನ್ಯಾಯಾಲಯಗಳು, ಗ್ರಾಮಾಂತರ ನ್ಯಾಯಾಲಯಗಳು, ಕೌಟುಂಬಿಕ ನ್ಯಾಯಾಲಯಗಳು, ಕಾರ್ಮಿಕ ನ್ಯಾಯಾಲಯಗಳು, ಕೈಗಾರಿಕಾ ನ್ಯಾಯಾಧಿಕರಣಗಳು, ರಜಾ ಅವಧಿಯ ರೀತಿಯಲ್ಲಿ ಕೆಲಸ ಮಾಡುತ್ತಿರುತ್ತವೆ ಮತ್ತು ಈ ನಿಗದಿತ ನ್ಯಾಯಾಲಯಗಳಲ್ಲಿ ಕೇವಲ ತುರ್ತು ವಿಷಯಗಳು ಹಾಗೂ ಜಾಮೀನು ವಿಷಯಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗುವುದು. ಯಾರಿಗೂ ಯಾವುದೇ ತೊಂದರೆಯಾಗದಂತೆ ವ್ಯಾಜ್ಯಪಟ್ಟಿಯಲ್ಲಿನ ವಿಷಯಗಳಿಗೆ ಮುದ್ದತ್ತು ದಿನಾಂಕಗಳನ್ನು ಸ್ವಯಂಚಾಲಿತವಾಗಿ ನಿಗದಿಪಡಿಸಲಾಗುವುದು.

**'ನೋವೆಲ್ ಕರೋನಾ ವೈರಸ್' (ಕೋವಿಡ್–19)** ಸಾಂಕ್ರಾಮಿಕವಾಗಿ ಹರಡುವುದನ್ನು ತಡೆಗಟ್ಟುವ ಸಲುವಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಾಮೂಹಿಕ ಕೂಟಗಳು ಹಾಗೂ ಸಾಮೂಹಿಕ ಜನಸಂದಣಿಯನ್ನು ನಿಯಂತ್ರಣ ಮಾಡುವಂತೆ ಮನವಿ ಮಾಡಿವೆ. ನಿನ್ನೆ ಹೊರಡಿಸಿದ ಜ್ಞಾಪನಪತ್ರದಲ್ಲಿ ಏನೇ ಇದ್ದಾಗ್ಯೂ, ಮೇಲೆ ಹೇಳಲಾದ ನ್ಯಾಯಾಲಯ ಸಂಕೀರ್ಣಗಳಲ್ಲಿ ಈ ದಿನ ಹೆಚ್ಚಿನ ಸಂಖ್ಯೆಯ ವಕೀಲರು ಹಾಗೂ ಕಕ್ಷಿದಾರರು ಹಾಜರಿರುವುದು ಕಂಡುಬಂದಿರುತ್ತದೆ. ವಕೀಲರ ಸಂಘದ ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ಮೇಲೆ ಹೇಳಲಾಗಿರುವ ನ್ಯಾಯಾಲಯ ಸಂಕೀರ್ಣಗಳಲ್ಲಿ ಕಡ್ಡಾಯವಾಗಿ ಹಾಜರಾಗಬೇಕಾದ ಸಂದರ್ಭವಿದ್ದಲ್ಲಿ ಮಾತ್ರ ಹಾಜರಾಗುವುದು. ಮೇಲ್ಕಂಡ ನ್ಯಾಯಾಲಯ ಸಂಕೀರ್ಣಗಳಲ್ಲಿ ಕಡ್ಡಾಯವಾಗಿ ಹಾಜರಾಗಬೇಕಾದ ಕಕ್ಷಿದಾರರನ್ನು ಮಾತ್ರ ನ್ಯಾಯಾಲಯಗಳಿಗೆ ಹಾಜರಾಗುವಂತೆ ನೋಡಿಕೊಳ್ಳಬೇಕೆಂದು ವಕೀಲರ ಸಂಘದ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಮಾರ್ಚ್ 21, 2020**

**ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕ್**
**ಮುಖ್ಯ ನ್ಯಾಯಮೂರ್ತಿ**